**ಇಂದು ದಿನಾಂಕ:*26.11.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.ಎಸ್.ಎಂ.ಪಿ. ವಕೀಲರಿಂದಃ**

ನಾನು ಪಿರಿಯಾಪಟ್ಟಣ ತಾಲ್ಲೂಕು, ಕಿರನಲ್ಲಿ ಗ್ರಾಮದಲ್ಲಿ ವಾಸವಿದ್ದೇನೆ. ಹರದೂರಿನಲ್ಲಿ ನಮ್ಮ ನೆಂಟರು ಇದ್ದಾರೆ ಈ ಕೇಸಿನ ವಾದಿ ಮತ್ತು ಪ್ರತಿವಾದಿಗಳು ನಮ್ಮ ನೆಂಟರಲ್ಲ. ಹೆಚ್.ಟಿ.ನಾಗರಾಜು ಬಿನ್ ತಿಮ್ಮೇಗೌಡರವರನ್ನು ನೋಡಿದ್ದೇನೆ. ಅಕ್ಕಯ್ಯಮ್ಮ ಅಲಿಯಾಸ್ ರುಕ್ಮಿಣಿಯವರನ್ನು ನೋಡಿಲ್ಲ. ಈ ಕೇಸನ್ನು ನಾಗರಾಜು ಮತ್ತು ಅವರ ತಾಯಿ ಲಕ್ಷ್ಮಮ್ಮರವರು ತಿಮ್ಮೇಗೌಡರ ವಿರುದ್ಧ ಹಾಕಿದ್ದಾರೆ. ಸದರಿ ದಾವೆಯನ್ನು ನಾಗರಾಜು ಮತ್ತು ಅವರ ಇಬ್ಬರ ಸಹೋದರಿಯರಾದ ಅಕ್ಕಯ್ಯಮ್ಮ ಮತ್ತು ನಾಗರತ್ನ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ತಿಮ್ಮೇಗೌಡರಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳು ಗೊತ್ತಿಲ್ಲ ದಾನ ಪತ್ರದ ಬಗ್ಗೆ ಗೊತ್ತಿದೆ.

ತಿಮ್ಮೇಗೌಡರ ತಾಯಿ, ಹೆಂಡತಿ ಮತ್ತು ಮಕ್ಕಳು ಹೊರತುಪಡಿಸಿ ಅವರ ಕುಟುಂಬದ ಬೇರೆ ವ್ಯಕ್ತಿಗಳ ಬಗ್ಗೆ ಗೊತ್ತಿಲ್ಲ. ತಿಮ್ಮೇಗೌಡರ ತಂದೆ ಹೆಸರು ಕರಿಯಪ್ಪ ಮತ್ತು ತಾಯಿಯ ಹೆಸರು ತಿಮ್ಮಮ್ಮ. ತಿಮ್ಮೇಗೌಡರಿಗೆ ಇಬ್ಬರು ಹೆಂಡತಿಯರು ಅವರೆಂದರೆ ಲಕ್ಷ್ಮಮ್ಮ ಮತ್ತು 2 ನೇಯವರು ಶಿವಮ್ಮ, ಅವರಿಬ್ಬರು ಬದುಕಿದ್ದಾರೆ. ತಿಮ್ಮೇಗೌಡರ 2 ನೇ ಹೆಂಡತಿಯ ಹೆಸರು ಯಲ್ಲಮ್ಮ ಎಂದರೆ ಗೊತ್ತಿಲ್ಲ. ಸದರಿ ಯಲ್ಲಮ್ಮನವರಿಗೆ 3 ಜನ ಮಕ್ಕಳು ಎಂದರೆ ನಾಗರಾಜು ಒಬ್ಬರನ್ನು ಹೊರತುಪಡಿಸಿ ಉಳಿದವರು ಗೊತ್ತಿಲ್ಲ. ನಾಗರಾಜುರವರ ಜೊತೆ ರುಕ್ಮಿಣಿ ಅಲಿಯಾಸ್ ಅಕ್ಕಯ್ಯಮ್ಮ ಹಾಗೂ ನಾಗರತ್ನಮ್ಮ ಇವರು ಸಹ ಮಕ್ಕಳು ಎಂದರೆ ಗೊತ್ತಿಲ್ಲ.

ಈ ಕೇಸನ್ನು ಸ.ನಂ.35/2 ನೇ ಸರ್ವೆ ನಂಬರ್ ಹಾಗೂ ಇತರೆ ಸರ್ವೆ ನಂಬರ್ ಗೆ ಹಾಕಿದ್ದಾರೆ ಅದೊಂದು ಮಾತ್ರ ನನಗೆ ಗೊತ್ತು. ತಿಮ್ಮೇಗೌಡರಿಗೆ 9 ಎಕರೆ ಚಿಲ್ಲರೆ ಜಮೀನು ಇದೆ.

ನಮ್ಮ ವಿರುದ್ಧ ಈ ನ್ಯಾಯಾಲಯದಲ್ಲಿ 2 ಕೇಸು ಹಾಗೂ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ 2 ಕೇಸು ನಡೆಯುತ್ತಿದೆ. ಈ ಕೇಸನ್ನು ವಾದಿ ಪಿತ್ರಾರ್ಜಿತ ಆಸ್ತಿಗಳಿಗೆ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ದಾನ ಪತ್ರಕ್ಕೆ ನಾಗರಾಜು ಸಹಿ ಮಾಡಿರುವುದಿಲ್ಲ ತಿಮ್ಮೇಗೌಡರು ಮಾಡಿರುತ್ತಾರೆ. 4 ಎಕರೆ 27 ಗುಂಟೆಗೆ ಸಂಬಂಧಿಸಿದಂತೆ ದಾನ ಪತ್ರ ಆಗಿದೆ. ಅದರ ಚೆಕ್ಕುಬಂಧಿ ಗೊತ್ತಿದೆ ಪೂರ್ವಕ್ಕೆ ಕೆರೆ, ಪಶ್ಚಿಮಕ್ಕೆ ಸ.ನಂ.35/1 ಮತ್ತು ರಸ್ತೆ, ಉತ್ತರಕ್ಕೆ ಹರದೂರು ಗಡಿ, ದಕ್ಷಿಣಕ್ಕೆ ಗೋವಿಂದರವರ ಜಮೀನು ಇರುತ್ತದೆ.

ತಿಮ್ಮೇಗೌಡರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಹರದೂರಿನ ಗೋವಿಂದ ನನಗೆ ಗೊತ್ತು ಸದರಿ ಗೋವಿಂದಣ್ಣ 2 ನೇ ಪ್ರತಿವಾದಿಗೆ ಹೇಳಿ ಅವರ ಮೂಲಕ ನನ್ನನ್ನು ಸಾಕ್ಷಿ ಹೇಳಿಸುವಂತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾನ ಪತ್ರದ ಬಗ್ಗೆ ನನಗೆ ಏನು ಗೊತ್ತಿಲ್ಲದಿದ್ದರೂ 2 ನೇ ಪ್ರತಿವಾದಿ ಹೇಳಿ ಕೊಟ್ಟಿರುವ ರೀತಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾನ ಪತ್ರವನ್ನು ತಿಮ್ಮೇಗೌಡರು ಬರೆದಿದ್ದಾರೆ. ಪತ್ರ ಬರಹಗಾರರು ಬಿಳ್ಲಂ ಆಗಿದ್ದಾರೆ ಅವರ ಹೆಸರು ಗೊತ್ತಿಲ್ಲ. ತಿಮ್ಮೇಗೌಡರು ಯಾವುದೇ ದಾನ ಪತ್ರ ಬರೆದಿಲ್ಲದಿದ್ದರೂ 2 ನೇ ಪ್ರತಿವಾದಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳ ಪಿತ್ರಾರ್ಜಿತ ಸಂಬಂಧಿಸಿದಂತೆ ತಿಮ್ಮೇಗೌಡರು ಒಬ್ಬರೇ ದಾನ ಪತ್ರ ಬರೆಯುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೇ.ಕೇ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**